**ಪಾಠ-4** **ಜುಲೈ 18-24**

# ಪ್ರಾರ್ಥನೆಯ ಶಕ್ತಿ : ಇತರರಿಗಾಗಿ ಮಧ್ಯಸ್ಥಿಕೆ ವಹಿಸುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಪ್ರಕ 12:7-9; ಎಫೆಸ 6:12; ಇಬ್ರಿ 7:25; ಎಫೆಸ 1:15-21; ದಾನಿ 10:10-14 ಮತ್ತು 1 ಯೋಹಾನ 5:14-16.

**ಸ್ಮರಣವಾಕ್ಯ : "ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹುಬಲವುಳ್ಳದ್ದಾಗಿದೆ"** (ಯಾಕೋಬ 5:16)..

ಹೊಸ ಒಡಂಬಡಿಕೆಯ ಕಾಲದ ಸಭೆಯು ಪ್ರಾರ್ಥನೆಯ ಅವಶ್ಯಕತೆಯನ್ನು ಮನಗಂಡಿತು. "ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು, ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ದೇವರವಾಕ್ಯವನ್ನು ಧೈರ್ಯದಿಂದ ಹೇಳುವವರಾದರು (ಅ.ಕೃ 4:31). ಶಿಷ್ಯರು ಪ್ರಾರ್ಥಿಸುದುದನ್ನು ಗಮನಿಸಿರಿ. ಅವರು ಮೊದಲು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು ನಂತರ ದೇವರ ವಾಕ್ಯವನ್ನು ದಿಟ್ಟತನದಿಂದ ಅಥವಾ ವಿಶ್ವಾಸದಿಂದ ಹೇಳತೊಡಗಿದರು. ಪ್ರಾರ್ಥನೆಗೂ

* ಜುಲೈ 25ರ ಸಬ್ಬತ್ತಿಗಾಗಿ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಪವಿತ್ರಾತ್ಮನಿಂದ ತುಂಬಲ್ಪಡುವುದಕ್ಕೂ ಮತ್ತು ದೇವರವಾಕ್ಯವನ್ನು ಬಲಯುತವಾಗಿ ಸಾರಿ ಹೇಳುವುದಕ್ಕೂ ನೇರವಾದ ಸಂಬಂಧವಿದೆ. "ಶಿಷ್ಯರು ತಮಗಾಗಿ ಯಾವ ಆಶೀರ್ವಾದಗಳನ್ನು ಸುಮ್ಮನೆ ಕೇಳಿಕೊಳ್ಳಲಿಲ್ಲ ಆತ್ಮಗಳು ರಕ್ಷಣೆಗೊಳ್ಳುವ ಭಾರದಿಂದ ಅವರು ನಲುಗಿಹೋಗಿದ್ದರು. ಲೋಕಕ್ಕೆ ಸುವಾರ್ತೆ ಸಾರಲ್ಪಡಬೇಕೆಂಬುದನ್ನು ಅರಿತವರಾಗಿ, ವಾಗ್ದಾನ ಮಾಡಲ್ಪಟ್ಟ ಶಕ್ತಿಯನ್ನು ಪಡೆಯಲನುವಾದರು"– ಎಲೆನ್ ಜಿ ವೈಟಮ್ಮನವರ ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ 37ನೇ ಪುಟ.

ನಾವು ಇತರರಿಗೋಸ್ಕರ ದೇವರಲ್ಲಿ ಮಧ್ಯಸ್ಥಿಕೆ ವಹಿಸುವಾಗ ದೇವರು ನಮ್ಮ ಹೃದಯದಲ್ಲಿ ಕಾರ್ಯವೆಸಗುತ್ತಾನೆ ಮತ್ತು ಇತರರನ್ನು ಆತನ ರಾಜ್ಯಕ್ಕೆ ಸೇರಿಸಲು ಅಗತ್ಯವಾದ ದೈವೀಕಜ್ಞಾನವನ್ನು ಕೊಡುತ್ತಾನೆ (ಯಾಕೋಬ 1:5). ಆತನು ಅವರ ಜೀವಿತದಲ್ಲಿಯೂ ಸಹಾ ನಮಗೆ ಕಾಣದಂತೆ ಅಥವಾ ಪೂರ್ಣವಾಗಿ ಅರ್ಥವಾಗದ ರೀತಿಯಲ್ಲಿ ಬಲಯುತವಾಗಿ ಕೆಲಸ ಮಾಡುತ್ತಾನೆ (1 ಯೋಹಾನ 5:14–17).

**ಭಾನುವಾರ** **ಜುಲೈ 19**

## ವಿಶ್ವಮಟ್ಟದ ಒಂದು ಹೋರಾಟ

ಪ್ರಕಟನೆಗಳು 12:7–9 ವಚನಗಳನ್ನು ಎಫೆಸ 6:12 ಮತ್ತು 2 ಕೊರಿಂಥ 12:4 ವಚನಗಳೊಂದಿಗೆ ಹೋಲಿಸಿರಿ. ನಮ್ಮ ಮಧ್ಯಸ್ಥಿಕೆಯ ಪ್ರಾರ್ಥನೆಯ ಗ್ರಹಿಕೆಯ ಮೇಲೆ ಈ ವಚನವೃಂದಗಳು ಹೇಗೆ ಪ್ರಭಾವಬೀರುತ್ತವೆ?

___

___

ದೃಶ್ಯ ಮತ್ತು ಅದೃಶ್ಯ ಲೋಕದ ನಡುವೆಯಿರುವ ಪರದೆಯನ್ನು ಸತ್ಯವೇದವು ಸರಿಸಿಬಿಡುತ್ತದೆ. ಒಳ್ಳೆಯದರ ಮತ್ತು ಕೆಟ್ಟುದರ ನಡುವೆ, ನೀತಿ ಮತ್ತು ಅಂಧಕಾರ ಶಕ್ತಿಗಳ ನಡುವೆ, ಕ್ರಿಸ್ತನ ಮತ್ತು ಸೈತಾನನ ನಡುವೆ ಒಂದು ಹೋರಾಟ (ಸಂಘರ್ಷ) ನಡೆಯುತ್ತಲಿದೆ. ಈ ವಿಶ್ವಮಟ್ಟದ ಸಂಘರ್ಷದಲ್ಲಿ ದೇವರು ಮನುಷ್ಯನ ಆಯ್ಕೆಯ ಸ್ವಾತಂತ್ರ್ಯವನ್ನು ಮಾನ್ಯ ಮಾಡುತ್ತಾನೆ. ಆತನು ಎಂದಿಗೂ ನಮ್ಮ

ಆಯ್ಕೆಯನ್ನಾಗಲೀ ನಮ್ಮ ಮನಸ್ಸಾಕ್ಷಿಯನ್ನಾಗಲೀ ತನ್ನ ಇಷ್ಟಕ್ಕೆ ತಕ್ಕಹಾಗೆ ನಿರ್ಬಂಧಿಸುವುದಿಲ್ಲ. ದಿವ್ಯಸತ್ಯಗಳನ್ನು ನಮಗೆ ಮನದಟ್ಟಾಗುವಂತೆ ಮಾಡಲು ತನ್ನ ಪರಿಶುದ್ಧಾತ್ಮನನ್ನು ಕಳುಹಿಸುತ್ತಾನೆ (ಯೋಹಾನ 16:7,8). ಪರಲೋಕದ ಜೀವಿಗಳು (ದೇವದೂತರು) ಜನರನ್ನು ನಿತ್ಯಕ್ಕೂ ಪ್ರಭಾವಿಸಲು ಈ ಸಂಘರ್ಷಕ್ಕೆ ಪ್ರವೇಶಿಸಿದ್ದಾರೆ (ಇಬ್ರಿ 1:14). ದೇವರೂ ಸಹಾ ಜನರ ಜೀವಿತದಲ್ಲಿ ದೈವೀಕ ಘಟನೆಗಳನ್ನು ಏರ್ಪಡಿಸಿ ಅವರನ್ನು ತನ್ನೆಡೆಗೆ ನಡೆಸುವವನಾಗಿದ್ದಾನೆ.

ದೇವರು ನಮ್ಮ ಮನಸ್ಸಾಕ್ಷಿಯನ್ನು ಎಂದೆಂದಿಗೂ ನಿರ್ಬಂಧಿಸುವುದಿಲ್ಲ. ಬಲವಂತಪಡಿಸುವುದು ದೇವರ ರಾಜ್ಯಕ್ಕೆ ವ್ಯತಿರಿಕ್ತವಾದುದಾಗಿದೆ. ಬಲವಂತಪಡಿಸುವುದು ಪ್ರೀತಿಯ ನಿಯಮಕ್ಕೆ ಅಪರಿಚಿತವಾಗಿದೆ, ದೇವರ ಸರ್ಕಾರಕ್ಕೆ ಪ್ರೀತಿಯೇ ಅಸ್ತಿವಾರವಾಗಿದೆ. ಇಲ್ಲಿ ತಾನೆ ಪ್ರಾರ್ಥನೆಯು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ನಾವು ಪ್ರಾರ್ಥನೆ ಮಾಡುವುದಕ್ಕೆ ಮೊದಲೇ ದೇವರು ನಮ್ಮನ್ನು ತಲುಪಲು ಎಲ್ಲವನ್ನೂ ಮಾಡುತ್ತಾನಾದರೂ ನಮ್ಮ ಪ್ರಾರ್ಥನೆಯು ದೇವರ ಮಹಾಶಕ್ತಿಯನ್ನು ಬಿಚ್ಚಿಬಿಡುತ್ತದೆ. ಆತನು ನಮಗೆ ಮತ್ತೊಬ್ಬರಿಗಾಗಿ ಪ್ರಾರ್ಥನೆ ಮಾಡುವ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಆತನು ಇತರರು ಪ್ರಾರ್ಥನೆ ಮಾಡಿದ ಪ್ರಯುಕ್ತ ಅವರ ಪರವಾಗಿ ಹೆಚ್ಚಾಗಿ ಮಾಡುವವನಾಗಿದ್ದಾನೆ.

ಈ ಹೇಳಿಕೆಯನ್ನು ಎಚ್ಚರಿಕೆಯಿಂದ ಪರಿಗಣಿಸಿರಿ : ನಾವು ಬೇಡುವಾಗ ಅದನ್ನು ಅನುಗ್ರಹಿಸುವುದು ಮತ್ತು ಅದನ್ನು ಬೇಡದಿರುವಾಗ ಅನುಗ್ರಹಿಸದೆ ಇರುವುದು ದೇವರ ಯೋಜನೆಯಾಗಿದೆ"– ಎಲೆನ್ ಜಿ ವೈಟಮ್ಮನವರ "ಮಹಾಹೋರಾಟ" ಪುಸ್ತಕದಲ್ಲಿ 525ನೇ ಪುಟ. ಒಳ್ಳೆಯದಕ್ಕೂ ಕೆಟ್ಟದಕ್ಕೂ ಇರುವ ಮಹಾಹೋರಾಟದಲ್ಲಿ ಪ್ರಾರ್ಥನೆಯು ವ್ಯತ್ಯಾಸವನ್ನು ತರಬಲ್ಲದು. ನಾವು ಕ್ರಿಸ್ತನನ್ನು ಅರಿಯದ ಮತ್ತೊಬ್ಬನಿಗಾಗಿ ಪ್ರಾರ್ಥನೆ ಮಾಡುವಾಗ ದೈವೀಕ ಆಶೀರ್ವಾದಗಳ ಕಾಲುವೆಗಳು ಅವರ ಜೀವಿತದಲ್ಲಿ ಹರಿಯುವ ಹಾಗೆ ತೆರೆಯಲ್ಪಡುತ್ತವೆ. ದೇವರು ನಮ್ಮ ಪ್ರಾರ್ಥನೆಯ ಆಯ್ಕೆ ಸ್ವಾತಂತ್ರ್ಯವನ್ನು ಮಾನ್ಯ ಮಾಡಿ ಅವರ ಪರವಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಾನೆ.

ಮಧ್ಯಸ್ಥಿಕೆಯ ಪ್ರಾರ್ಥನೆಯ ವಿಷಯದಲ್ಲಿ ನಾವು ವ್ಯವಹರಿಸುತ್ತಿರುವಾಗ ನಮಗೆ ದೇವರ ಕಾರ್ಯವು ಸಂಪೂರ್ಣವಾಗಿ ಗೊತ್ತಿಲ್ಲದಿರುವುದರಿಂದ ದೀನತೆಯಿಂದ ನಾವು ನಮ್ಮ ಅಜ್ಞಾನವನ್ನು ಒಪ್ಪಿಕೊಳ್ಳುವವರಾಗಿರಬೇಕು, ಆದರೆ ಈ ಕೊರತೆಯು ನಮ್ಮನ್ನು ಇತರರಿಗಾಗಿ ಪ್ರಾರ್ಥಿಸಲು ಮುಂದುವರೆಯುವುದನ್ನು ತಡೆಯದಂತೆ ಎಚ್ಚರವಹಿಸಬೇಕು.

ನಾವು ಪ್ರಾರ್ಥನೆ ಮಾಡಲು ಅಸಡ್ಡೆ ಮಾಡಿದಾಗ ಕೊಡುವುದಕ್ಕಿಂತ ಹೆಚ್ಚಾಗಿ ಪ್ರಾರ್ಥನೆ ಮಾಡಿದಾಗ ಹೆಚ್ಚು ಬಲಯುತವಾಗಿ ದೇವರು ಕೆಲಸ ಮಾಡುತ್ತಾನೆಂದು ಏಕೆ ಅಂದುಕೊಳ್ಳುವಿರಿ?

ನಮಗೆ ಇದೆಲ್ಲವು ಹೇಗೆ ಕಾರ್ಯ ಮಾಡುತ್ತವೆ ಎಂಬುದು ಸಂಪೂರ್ಣವಾಗಿ ಅರ್ಥವಾಗದಿದ್ದರೂ ಸತ್ಯವೇದವು ನಾವು ಇತರರಿಗಾಗಿ ಪ್ರಾರ್ಥಿಸಬೇಕೆಂಬ ಎಚ್ಚರಿಕೆಯನ್ನು ಕೊಡುತ್ತದೆ ಏಕೆ?

**ಸೋಮವಾರ** **ಜುಲೈ 20**

## ಯೇಸು : ಬಲಾಢ್ಯನದ ಮಧ್ಯಸ್ಥನು

ಓದಿರಿ : ಲೂಕ 3:21; ಲೂಕ 5:16 ಮತ್ತು ಲೂಕ 9:18 ಈ ವಚನಗಳು ಯೇಸುಕ್ರಿಸ್ತನ ಪ್ರಾರ್ಥನಾಜೀವಿತಕ್ಕೂ ಮತ್ತು ಆತನ ಸೇವೆಯ ಪರಿಣಾಮಕತೆಗೂ ಇರುವ ಸಂಬಂಧದ ಬಗ್ಗೆ ಏನನ್ನು ಹೇಳುತ್ತವೆ?

ಯೇಸುಕ್ರಿಸ್ತನು ತನ್ನ ಜೀವನದಲ್ಲಿ ನಿರಂತರವಾಗಿ ತನ್ನ ತಂದೆಯ ದಿವ್ಯ ಸಹವಾಸದಲ್ಲಿದ್ದನು. ಆತನು ತನ್ನ ದೀಕ್ಷಾಸ್ನಾನದ ಸಂದರ್ಭದಲ್ಲಿ, ತನ್ನ ಸೇವೆಯನ್ನು ಪ್ರಾರಂಭ ಮಾಡುವಾಗ ಪರಲೋಕದ ಉದ್ದೇಶವನ್ನು ಸಾಧಿಸುವುದಕ್ಕೋಸ್ಕರ ಯೇಸುವು ದಿವ್ಯಶಕ್ತಿಯನ್ನು ಬೇಡಿಕೊಂಡನು. ಪರಿಶುದ್ಧಾತ್ಮನು ಆತನನ್ನು ಬಲಗೊಳಿಸಿ ತಂದೆಯ ಚಿತ್ತವನ್ನು ನೆರವೇರಿಸುವ ಕೆಲಸಕ್ಕೆ ಬೇಕಾದ ಸಹಾಯವನ್ನು ಮಾಡಿದನು. ಐದುಸಾವಿರ ಜನಕ್ಕೆ ಆಹಾರ ಕೊಟ್ಟದ್ದರಲ್ಲಿ ಕುಷ್ಟರೋಗವನ್ನು ಗುಣಪಡಿಸಿದ್ದರಲ್ಲಿ ಅಥವಾ ದೆವ್ವ ಹಿಡಿದವರನ್ನು ಬಿಡಿಸಿದುದರಲ್ಲಿ ಒಳ್ಳೇದರ ಮತ್ತು ಕೆಟ್ಟದರ ನಡುವೆ ನಡೆಯುತ್ತಿರುವ ಹೋರಾಟದಲ್ಲಿ ಪ್ರಾರ್ಥನೆಯು ವೈರಿಯ ಸಮಸ್ತಬಲಗಳನ್ನು ಹಿಮ್ಮೆಟ್ಟಿಸಲು ಅಗತ್ಯವಾದ

ಆಯುಧವೆಂದು ಯೇಸುಕ್ರಿಸ್ತನು ಅರಿತವನಾಗಿದ್ದನು. ಪ್ರಾರ್ಥನೆಯು ನಮ್ಮ ಅಸಹಾಯಕತೆ ಮತ್ತು ಬಲಹೀನತೆಗಳನ್ನು ದೇವರ ಸರ್ವಶಕ್ತತೆಯ ಜೊತೆಗೆ ಬೆಸೆಯುವ ಪರಲೋಕವು ಪ್ರತಿಷ್ಠಿಸಿದ ವಿಧಾನವಾಗಿದೆ. ನಮ್ಮನ್ನು ಮೇಲಕ್ಕೆ ತಂದೆಯ ಬಳಿಗೆ ಹೊತ್ತು ಒಯ್ಯುವ ಸಾಧನವಾಗಿದೆ ನಾವು ಯಾರಿಗೋಸ್ಕರ ಪ್ರಾರ್ಥಿಸುವೆವೋ ಅವರನ್ನು ತಂದೆಯು ಮುಟ್ಟಬಲ್ಲವನಾಗಿದ್ದಾನೆ.

ಲೂಕ 22:31–34 ಮತ್ತು ಇಬ್ರಿಯ 7:25 ವಚನಗಳನ್ನು ಓದಿರಿ. ಸ್ವಲ್ಪ ಸಮಯದ ಬಳಿಕ ನಡೆಯಲಿದ್ದ ಶೋಧನೆಯನ್ನು ಎದುರಿಸಲು ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಲು ಪೇತ್ರನಿಗೆ ಯೇಸುವು ಯಾವ ಭರವಸೆಯನ್ನು ಕೊಟ್ಟನು? ನಮ್ಮಲ್ಲಿ ಪ್ರತಿಯೊಬ್ಬರು ಶೋಧನೆಗಳನ್ನು ಎದುರಿಸುವಾಗ ಆತನು ಯಾವ ಭರವಸೆಯನ್ನು ನಮಗೆ ಕೊಡುತ್ತಾನೆ?

ಪ್ರಾರ್ಥನೆ ಮಾಡುವ ಸ್ತ್ರೀ ಪುರುಷರು ಪರಿಣಾಮಕಾರಿಯಾಗಿ ಆತ್ಮಗಳನ್ನು ಗೆಲ್ಲುವವರಾಗಿರುತ್ತಾರೆ. ಯೇಸುವು ಪೇತ್ರನ ಹೆಸರು ಹಿಡಿದುಕೊಂಡು ಪ್ರಾರ್ಥಿಸಿದನು. ಪೇತ್ರನು ದೊಡ್ಡ ಶೋಧನೆಗೆ ಒಳಗಾದ ಸಮಯದಲ್ಲಿ ಆತನಿಗೋಸ್ಕರ ಪ್ರಾರ್ಥನೆ ಮಾಡುತ್ತೇನೆಂದು ಯೇಸುವು ಅವನಿಗೆ ಭರವಸೆ ಕೊಟ್ಟನು. ದೇವರ ರಾಜ್ಯದ ಬರೋಣವನ್ನು ತ್ವರೆಪಡಿಸಲು ಬೇಕಾದ ಸಾಮರ್ಥ್ಯವು ಪೇತ್ರನಿಗಿದೆ ಎಂಬುದು ಸೈತಾನನಿಗೆ ಸರಿಯಾಗಿ ಅರ್ಥವಾಗಿತ್ತು.

ಪೇತ್ರನು ಕ್ರೈಸ್ತ ಸಭೆಯ ಮೇಲೆ ಬೀರುವ ಸಕಾರಾತ್ಮಕ ಪ್ರಭಾವವನ್ನು ನಾಶಪಡಿಸಲು ಸೈತಾನನು ಯೋಜಿಸಿಕೊಂಡಿದ್ದನು. ಆದರೆ ಈ ಶೋಧನೆಗಳನ್ನು ಪೇತ್ರನು ಹಾದು ಹೋಗುತ್ತಿರುವಾಗ ಯೇಸುವು ಆತನಿಗೋಸ್ಕರ ಪ್ರಾರ್ಥಿಸುತ್ತಿದ್ದನು ಮತ್ತು ಗುರುವಿನ ಪ್ರಾರ್ಥನೆಗಳಿಗೆ ಉತ್ತರ ದೊರಕುತ್ತಿತ್ತು. ರಕ್ಷಕನು ಈವಾಗ ನಮಗೋಸ್ಕರವು ಸಹಾ ಪ್ರಾರ್ಥಿಸುತ್ತಾನೆಂಬ ವಾಸ್ತವದ ಅರಿವು ನಮಗೆ ಎಂಥಾ ರೋಮಾಂಚನಕಾರಿಯಾಗಿದೆ. ಇತರರ ಹೆಸರುಗಳು ಆತನ ಸನ್ನಿಧಾನಕ್ಕೆ ಎತ್ತಲ್ಪಡುವಂತೆ ಅವರಿಗೋಸ್ಕರ ವಿಜ್ಞಾಪನೆ ಮಾಡುವ ಕೆಲಸದಲ್ಲಿ ತನ್ನ ಜೊತೆಗೆ ಸೇರಲು ಕ್ರಿಸ್ತನು ನಮ್ಮನ್ನು ಆಹ್ವಾನಿಸುತ್ತಾನೆ.

ಪ್ರಾರ್ಥಿಸುವಲ್ಲಿ ನಾವು ತೋರಿಸುವ ನಿರಂತರ ಪ್ರಯತ್ನವು ನಾವು ಯಾರಿಗೋಸ್ಕರ ಪ್ರಾರ್ಥಿಸುತ್ತೇವೆಯೋ ಅವರನ್ನು ತಲುಪಲು ದೇವರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದೇವೆ ಎಂಬುದನ್ನು ಗುರುತಿಸಿ ಒಪ್ಪಿಕೊಳ್ಳುವುದಾಗಿದೆ.

ನೀವು ಈವಾಗ ಯಾರಿಗೋಸ್ಕರ ಪ್ರಾರ್ಥಿಸುತ್ತಿರುವಿರಿ? ಸನ್ನಿವೇಶವು ಎಷ್ಟೇ ಕಷ್ಟವೆಂದು ಅನ್ನಿಸಿದಾಗ್ಯೂ ಎಂದೆಂದಿಗೂ ಬಿಟ್ಟುಕೊಡದಿರುವುದು ಬಹಳ ಮುಖ್ಯ ಏಕೆ?

**ಮಂಗಳವಾರ** **ಜುಲೈ 21**

## ಪೌಲನ ಮಧ್ಯಸ್ಥಿಕೆಯ ಪ್ರಾರ್ಥನೆಗಳು

ಮಧ್ಯಸ್ಥಿಕೆಯ ವಿಜ್ಞಾಪನೆಯು ಸತ್ಯವೇದನುಸಾರವಾಗಿದೆ. ಪೌಲನು ತನ್ನ ಸುವಾರ್ತಾ ಸೇವೆಯ ಮೂಲಕ ಸ್ಥಾಪಿಸಿದ ಸಭೆಗಳಿಗೆ ಸೇರಿದ ಹೊಸಬರಿಗೋಸ್ಕರ ಪಾರ್ಥಿಸುತ್ತಿದ್ದನು. ಪ್ರಾರ್ಥನೆ ಮಾಡುವಾಗ ಏನಾದರೊಂದು ಆಗುತ್ತದೆ. ಮಾಡದಿರುವಾಗ ಏನು ಆಗುವುದಿಲ್ಲವೆಂದು ಪೌಲನು ನಂಬಿದ್ದನು. ತನ್ನನ್ನು ಪ್ರೀತಿಸುವವರಿಂದ ಪ್ರತ್ಯೇಕಿಸಲ್ಪಟ್ಟಿದ್ದರೂ ಒಬ್ಬರಿಗೊಬ್ಬರು ಪ್ರಾರ್ಥಿಸುವಾಗ ಹೃದಯದಲ್ಲಿ ನಾವು ಒಂದಾಗಿರುತ್ತೇವೆಂದು ಆತನು ಕಂಡುಕೊಂಡಿದ್ದನು.

ಎಫೆಸ 1:15–21ನ್ನು ಓದಿರಿ. ಪೌಲನು ಎಫೆಸದವರಿಗೋಸ್ಕರ ಮಾಡಿದ ಬೇರೆ ಬೇರೆ ವಿಜ್ಞಾಪನೆಗಳನ್ನು ಪಟ್ಟಿ ಮಾಡಿರಿ. ನಿರ್ದಿಷ್ಟವಾಗಿ ಅವರಿಗೋಸ್ಕರ ದೇವರನ್ನು ಯಾಕೆ ಬೇಡಿದನು?

ವಿಶ್ವಾಸಿಗಳಿಗೋಸ್ಕರ ಪೌಲನು ಮಾಡಿದ ಪ್ರಾರ್ಥನೆಯು ವಿಶಿಷ್ಟವಾದುದಾಗಿದೆ. ಎಫೆಸದವರಿಗೆ ದೈವೀಕ ಸತ್ಯಗಳ ಜ್ಞಾನೋದಯವಾಗುವಂತೆ ಮತ್ತು ನಿತ್ಯಜೀವದ ನಿರೀಕ್ಷೆಯನ್ನು ಅವರಿಗೆ ಕೊಡುವಂತೆ ಪೌಲನು ಅವರಿಗೆ ಅಗತ್ಯವಾದ ಜ್ಞಾನ ಮತ್ತು ತಿಳುವಳಿಕೆಯನ್ನು ದೇವರಲ್ಲಿ ಕೇಳಿದನು. ತಮ್ಮ ಜೀವಿತದಲ್ಲಿ ಮಹತ್ಕಾರ್ಯಗಳನ್ನು ಮಾಡಬಲ್ಲ ದೇವರಶಕ್ತಿಯ ಅರಿವು ಅವರಿಗಾಗಲಿ ಎಂದು ದೇವರನ್ನು ಪ್ರಾರ್ಥಿಸಿದನು. ಈ ದೇವರು ಬಹಳ ಶಕ್ತಿಯುಳ್ಳವನು ಬಲಯುಳ್ಳವನು. ಯೇಸುಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದವನು. ಮನುಷ್ಯರ ನಿತ್ಯಜೀವದ

ನಿರೀಕ್ಷೆಗೆ ಈ ಘಟನೆ ತಾನೆ ಆಧಾರವಾಗಿದೆ. ಪೌಲನ ಪ್ರಾರ್ಥನೆಯು ವಿಶ್ವಾಸಗಳಿಗೆ ಕ್ರಿಸ್ತನ ಅತಿಶಯವಾದ ಮಹಿಮೆಯನ್ನು, ಪರಲೋಕದ ಬಾಧ್ಯತೆಯನ್ನು ನೆನಪು ಮಾಡಿಸುತ್ತಾ ಮುಕ್ತಾಯಗೊಳ್ಳುತ್ತದೆ. ಪೌಲನು ತಮಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾನೆಂದು, ಆತನು ಯಾವ ವಿಷಯದಲ್ಲಿ ಪ್ರಾರ್ಥಿಸುತ್ತಿದ್ದಾನೆಂದು ಅರಿತ ಎಫೆಸದ ವಿಶ್ವಾಸಿಗಳು ಖಂಡಿತವಾಗಿಯೂ ಉತ್ತೇಜನ ಹೊಂದಿದವರಾಗುತ್ತಾರೆ.

ಫಿಲಿಪ್ಪಿ 1:3–11 ವಚನಗಳನ್ನು ಓದಿರಿ. ಪೌಲನ ಪ್ರಾರ್ಥನೆಯ ದಾಟಿಯನ್ನು ಗಮನಿಸಿರಿ. ನೀವು ಫಿಲಿಪ್ಪಿ ಸಭೆಯ ಸದಸ್ಯರಾಗಿದ್ದು ಪೌಲನಿಂದ ಇದೇ ರೀತಿಯ ಪತ್ರವು ನಿಮಗೆ ಬಂದಿರುತ್ತಿದ್ದರೆ ಆತನು ನಿಮಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾನೆಂಬುದನ್ನೂ ಮತ್ತು ಪತ್ರದಲ್ಲಿರುವ ವಿಷಯವನ್ನು ಎಲ್ಲರಿರೊಂದಿಗೆ ಹಂಚಿಕೊಳ್ಳಬೇಕೆಂಬುದನ್ನು ತಿಳಿದಾಗ ನಿಮ್ಮಲ್ಲಿ ಯಾವ ಭಾವನೆ ಇರುತ್ತಿತ್ತು ಮತ್ತು ಯಾಕೆ? ಯಾವ ವಾಗ್ದಾನಗಳು ಆ ಪತ್ರದಲ್ಲಿ ತುಂಬಿವೆ? ಹಾಗೆಯೇ ಯಾವ ತರದ ಎಚ್ಚರಿಕೆಗಳು ಕೊಡಲ್ಪಟ್ಟಿವೆ?

ಇವು ಸತ್ಯವೇದದಲ್ಲಿ ಸಿಗುವ ಬಹಳ ಪ್ರೋತ್ಸಾಹದಾಯಕವಾದ ಮತ್ತು ಭರವಸೆ ತುಂಬುವ ಮಾತುಗಳಾಗಿವೆ. ಇದರಲ್ಲಿ ವಾಗ್ದಾನಗಳು ತುಂಬಿವೆ. ಮಾತ್ರವಲ್ಲದೆ ಯೇಸುವನ್ನು ಅರಿಯುವುದರಿಂದ ಬರುವ ಪ್ರೀತಿ, ಜ್ಞಾನ ಮತ್ತು ತಿಳುವಳಿಕೆಯನ್ನು ಹೊಂದಲು ಆತನು ಕೊಟ್ಟ ಕರೆಗಳಿಂದಲೂ ತುಂಬಿವೆ.

**ಬುಧವಾರ** **ಜುಲೈ 22**

## ಕಾರ್ಯವೆಸಗುವ ಅಗೋಚರಶಕ್ತಿಗಳು

ಇತರರ ಸಲುವಾಗಿ ಮಾಡುವ ವಿಜ್ಞಾಪನೆಯು (ಮಧ್ಯಸ್ಥಿಕೆಯ ಪ್ರಾರ್ಥನೆ) ಒಳ್ಳೇಯದರ ಮತ್ತು ಕೆಟ್ಟದ್ದರ ನಡುವೆ ನಡೆಯುವ "ಮಹಾಹೋರಾಟ"ದಲ್ಲಿ ಒಂದು ಬಲಯುತವಾದ ಆಯುಧವಾಗಿದೆ. ಇದರ ಸ್ಪಷ್ಟವಾದ ಪ್ರಕಟನೆಯು ದಾನಿಯೇಲ 10ನೇ ಅಧ್ಯಾಯದಲ್ಲಿದೆ.

ಪ್ರವಾದಿಯಾದ ಯೆರೆಮೀಯನು ಯೆಹೂದ್ಯರು ಎಪ್ಪತ್ತು ವರ್ಷಗಳ ಕಾಲ ಬ್ಯಾಬಿಲೋನಿನಲ್ಲಿ ಸೆರೆಯಾಳುಗಳಾಗಿರುತ್ತಾರೆ ಎಂದು ನುಡಿದ ಪ್ರವಾದನೆಯನ್ನು

ನೀವು ಇಲ್ಲಿ ಸ್ಮರಿಸಿಕೊಳ್ಳಬಹುದು. ದಾನಿಯೇಲನ ಜೀವಿತಾವಧಿಯು ಅಂತ್ಯಕ್ಕೆ ಬರುತ್ತಿದ್ದಂತೆಯೇ ಎಪ್ಪತ್ತು ವರುಷಗಳ ಸೆರೆವಾಸದ ಅವಧಿಯೂ ಸಹಾ ಮುಗಿಯುತ್ತಾ ಬಂತು. ಯೆರೆಮೀಯನ ಈ ಪ್ರವಾದನೆಯು ನೆರವೇರುವ ಸಣ್ಣ ಪುರಾವೆಯನ್ನು ದಾನಿಯೇಲನು ಕಂಡನು. ಆತನ ಜನರು ಇನ್ನೂ ಸೆರೆಯಾಳುಗಳಾಗಿಯೇ ಇದ್ದರು.

ಬ್ಯಾಬಿಲೋನನ್ನು ಮೇದ್ಯರು ಮತ್ತು ಪಾರಸಿಯರು ವಶಪಡಿಸಿಕೊಂಡರು ಆದರೆ ಯೆಹೂದ್ಯರು ಇನ್ನೂ ಸಹಾ ಸೆರೆಯಾಳುಗಳೇ ಆಗಿದ್ದರು. ದಾನಿಯೇಲನು ಮೂರುವಾರಗಳ ಕಾಲ ಉಪವಾಸವಿದ್ದು ಪ್ರಾರ್ಥಿಸಿದನು. ಆತನು ಶ್ರದ್ಧಾ ಪೂರ್ವಕವಾಗಿ ತನ್ನ ಜನರಿಗೋಸ್ಕರ ವಿಜ್ಞಾಪನೆ ಮಾಡಿಕೊಂಡನು. ಮೂರು ವಾರಗಳು ಕಳೆದ ಮೇಲೆ ಮಹಿಮೆಯುಳ್ಳ ದೂತನು ಅವನಿಗೆ ಕಾಣಿಸಿಕೊಂಡನು.

ದಾನಿಯೇಲ 10:10–14 ವಚನಗಳನ್ನು ಓದಿರಿ. ಯಾವಾಗ ದಾನಿಯೇಲನ ಪ್ರಾರ್ಥನೆಯು ಕೇಳಲ್ಪಟ್ಟಿತು (ಉತ್ತರ ಸಿಕ್ಕಿತು). ಅವನ ಪ್ರಾರ್ಥನೆಯನ್ನು ತಾತ್ಕಾಲಿಕವಾಗಿ ಅಡ್ಡಿಪಡಿಸಿದದು ಯಾವುದು?

ಇದು ಒಂದು ಸ್ವಾರಸ್ಯಕರವಾದ ಪುಟಭಾಗ. ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಇದರ ಕೆಲವು ಪಾತ್ರಗಳನ್ನು ಗುರುತಿಸೋಣ ಬನ್ನಿರಿ. ಪಾರಸಿಯ ಸಾಮ್ರಾಜ್ಯದ ಪ್ರಭುವು ಯಾರು? ಖಂಡಿತವಾಗಿಯೂ ಅದು ಕೈಸರನಲ್ಲ. ಅವನು ಪಾರಸಿಯ ಸಾಮ್ರಾಜ್ಯದ ಚಕ್ರವರ್ತಿ (ರಾಜನು). ಇಲ್ಲಿರುವ 'ಪಾರಸಿ ರಾಜ್ಯದ ಪ್ರಭು'ವು ಬಹುತೇಕವಾಗಿ ಸೈತಾನನ್ನು ಪ್ರತಿನಿಧಿಸುತ್ತಾನೆ.

ಯೇಸುವು ಆತನನ್ನು 'ಇಹಲೋಕಾಧಿಪತಿ' ಎಂದು ಕರೆಯುತ್ತಾನೆ (ಯೋಹಾನ 12:31 ಮತ್ತು 14:30). ಪೌಲನು ಸೈತಾನನ್ನು ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಯೆಂಬುದಾಗಿ ಅಣೆಪಟ್ಟಿ ಕಟ್ಟುತ್ತಾನೆ (ಎಫೆಸ 2:2). ಪಾರಸಿಯ ಪ್ರಭುವು ಸೈತಾನನ್ನು ಪ್ರತಿನಿಧಿಸುವುದಾದರೆ ಮೀಕಾಯೇಲನು ಯಾರನ್ನು ಪ್ರತಿನಿಧಿಸುತ್ತಾನೆ? "ಮೀಕಾಯೇಲ"ನೆಂಬ ಪದವು ಸತ್ಯವೇದದಲ್ಲಿ ಐದು ಕಡೆ ಸಿಗುತ್ತದೆ (ಪ್ರಕ 12:7; ಯೂದ 9; ದಾನಿ 10:13,21 ಮತ್ತು ದಾನಿ 12:1). ಈ ವಚನಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ ಮೀಕಾಯೇಲ

ಎಂಬುದು ಸೈತಾನನೊಡನೆ ಹೋರಾಡಲು ಸಮಸ್ತ ದೂತ ಸೈನ್ಯವನ್ನು ನಡೆಸುವ ಸೇನಾಧಿಪತಿಯನ್ನಾಗಿ ಯೇಸುಕ್ರಿಸ್ತನನ್ನು ವಿವರಿಸುವ ಇನ್ನೊಂದು ಹೆಸರಾಗಿದೆ. ಮೀಕಾಯೇಲ ಎಂದರೆ ದೇವರಂತಿರುವವನು ಎಂದು ಅರ್ಥಕೊಡುತ್ತದೆ.

ಯೇಸುಕ್ರಿಸ್ತನು ಸರ್ವಶಕ್ತನು, ಅನಂತನು, ಅವಾದಿಯಿಂದಲೂ ಅಸ್ತಿತ್ವದಲ್ಲಿರುವವನು ದೇವಕುಮಾರನೂ ಆಗಿದ್ದಾನೆ. ಸೇನಾಧಿಪತಿಯಾಗಿ ಆತನ ಕಾರ್ಯಗಳಲ್ಲಿ ಸೈತಾನನ್ನು ನಾಶಪಡಿಸುವುದು ಮುಖ್ಯವಾದ ಕಾರ್ಯವಾಗಿದೆ.

ದಾನಿಯೇಲ 10ನೇ ಅಧ್ಯಾಯವು ಪರದೆಯನ್ನು ಪಕ್ಷಕ್ಕೆ ಸರಿಸಿ ಒಳ್ಳೆಯದಕ್ಕೂ ಕೆಟ್ಟದಕ್ಕೂ ನಡುವೆ ನಡೆಯುವ ಹೋರಾಟವನ್ನು ತೋರಿಸಿಕೊಡುತ್ತದೆ. ದಾನಿಯೇಲನು ಪ್ರಾರ್ಥಿಸುತ್ತಿದ್ದಂತೆ ಯೇಸುವು ಪರಲೋಕದಿಂದ ಭೂಮಿಗೆ ಇಳಿದು ಬಂದು ನರಕದ ಬಲವನ್ನು ಹಿಮ್ಮೆಟ್ಟಿಸುತ್ತಾನೆ. ನಮಗೆ ಇದು ಕಣ್ಣಿಗೆ ಕಾಣದಿದ್ದರೂ ಯೇಸುವು ನಮ್ಮ ವಿಜ್ಞಾಪನೆಗೆ ಉತ್ತರ ಕೊಡಲು ಕಾರ್ಯನಿರ್ವಹಿಸುತ್ತಾನೆ. ಆತನು ಸರ್ವಶಕ್ತನಾದ ರಕ್ಷಕನು. ನಾವು ಮಾಡುವ ಯಾವ ಪ್ರಾರ್ಥನೆಯು ಆತನ ಗಮನಕ್ಕೆ ಬಾರದಿರುವುದಿಲ್ಲ.

ನಿಮ್ಮ ಸ್ವಂತ ಜೀವನದಲ್ಲಿ ಮಹಾಹೋರಾಟದ ವಾಸ್ತವಿಕತೆಯನ್ನು ಹೇಗೆ ನೋಡುವಿರಿ? ಮಹಾಹೋರಾಟ ವಾಸ್ತವವಾಗಿ ನಾವು ಎಂತಹ ಆಯ್ಕೆಗಳನ್ನು ಮಾಡಬೇಕೆಂದು ನಮಗೆ ಹೇಳುತ್ತದೆ?

**ಗುರುವಾರ** **ಜುಲೈ 23**

## ಪ್ರಾರ್ಥನೆಯ ಕೇಂದ್ರ

ಸತ್ಯವೇದದಾದ್ಯಂತ ಪ್ರಾರ್ಥನೆಯ ವಿಶಿಷ್ಟತೆಗೆ ಒತ್ತು ಕೊಡಲಾಗಿದೆ. ಪ್ರಾರ್ಥನೆ ಎಂಬುದು ಆತ್ಮವು ಅಸ್ಪಷ್ಟವಾದುದಕ್ಕೆ ತುಡಿಯುವಂಥದ್ದಲ್ಲ. ಅದು ನಮ್ಮ ನಿರ್ದಿಷ್ಟ ಮನವಿಗಳನ್ನು ದೇವರಮುಂದೆ ಮಂಡಿಸುವುದೇ ಆಗಿದೆ. ಕ್ರಿಸ್ತನು ತನ್ನ ಶಿಷ್ಯರಿಗೋಸ್ಕರ ನಿರ್ದಿಷ್ಟವಾಗಿ ಪ್ರಾರ್ಥಿಸಿದನು. ಅಪೊಸ್ತಲವಾದ ಪೌಲನು ಎಫೆಸದ, ಫಿಲಿಪ್ಪಿಯ ಮತ್ತು ಕೊಲಸ್ಸೆಯ ಸಭೆಯ ಕ್ರೈಸ್ತರಿಗಾಗಿ ಬಹಳ ನಿರ್ದಿಷ್ಟವಾಗಿ ಪ್ರಾರ್ಥಿಸಿದನು. ಆತನು ತರುಣಸುವಾರ್ತಿಕರಾದ ತಿಮೊಥೆ, ತೀತ ಮತ್ತು ಯೋಹಾನ ಮಾರ್ಕರಿಗಾಗಿ ಪ್ರಾರ್ಥಿಸಿದನು.

1 ಸಮುವೇಲ 12:22–24 ಮತ್ತು ಯೋಬ 16:21ನ್ನು ಓದಿರಿ. ಈ ಎರಡು ವಚನವೃಂದಗಳಲ್ಲಿ ಇರುವ ಸಮಾನತೆ ಯಾವುದು? ಮಧ್ಯಸ್ಥಿಕೆಯ ಪ್ರಾರ್ಥನೆ ಬಗ್ಗೆ ಇವು ಏನನ್ನು ಹೇಳುತ್ತವೆ?

______________________________

______________________________

ಸಮುವೇಲ ಮತ್ತು ಯೋಬ ಇಬ್ಬರೂ ಹೃದಯಪೂರ್ವಕವಾದ, ಶ್ರದ್ಧಾ ಪೂರ್ವಕವಾದ, ನಿರ್ದಿಷ್ಟವಾದ ಮಧ್ಯಸ್ಥಿಕೆಯ ಪ್ರಾರ್ಥನೆಯ ಅಗತ್ಯತೆಗೆ ಒತ್ತು ಕೊಡುತ್ತಾರೆ. ಸಮುವೇಲನ ಪದಗಳು ಸ್ಪಷ್ಟವಾಗಿ ಬಲಯುತವಾಗಿವೆ. ಆತನು ಹೀಗೆ ಮೊರೆಯಿಡುತ್ತಾನೆ : "ನಾನಾದರೋ ನಿಮಗೋಸ್ಕರವಾಗಿ ಯೆಹೋವನನ್ನು ಪ್ರಾರ್ಥಿಸುತ್ತಾ ಆತನ ಉತ್ತಮ ನೀತಿಮಾರ್ಗವನ್ನು ನಿಮಗೆ ತೋರಿಸಿಕೊಡುವುದನ್ನು ಬಿಡುವುದೇ ಇಲ್ಲ. ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು" (1 ಸಮುವೇಲ 12:23). ಸಮುವೇಲನ ಈ ಪ್ರಾರ್ಥನೆಯು ಯೋಬನ ಪ್ರಾರ್ಥನೆಯನ್ನು ಬಹುತೇಕವಾಗಿ ಪ್ರತಿಧ್ವನಿಸುತ್ತದೆ. ಮಾನವನ ನ್ಯಾಯವನ್ನು ಆತನ ಮಿತ್ರನ ಮುಂದೆಯೂ ಸ್ಥಾಪಿಸಲಿ ಎಂದು ದೇವರಿಗೇನೇ ಕಣ್ಣೀರು ಸುರಿಸುತ್ತೇನೆ (ಯೋಬ 16:21). ಕ್ರಿಸ್ತನನ್ನು ಅರಿಯದ ಗಂಡಸರು ಮತ್ತು ಹೆಂಗಸರಿಗೋಸ್ಕರ ದೇವರ ಹತ್ತಿರ ಮೊರೆಯಿಡುವುದು ನಮ್ಮ ಕೆಲಸವಾಗಿದೆ.

1 ಯೋಹಾನ 5:14–16 ವಚನಗಳನ್ನು ಓದಿರಿ. ನಾವು ಮತ್ತೊಬ್ಬರಿಗಾಗಿ ವಿಜ್ಞಾಪನೆ ಮಾಡುವಾಗ ಏನಾಗುತ್ತದೆ?

______________________________

______________________________

ನಾವು ಇತರರಿಗಾಗಿ ದೇವರಲ್ಲಿ ಬೇಡುವಾಗ ನಾವು ಅವರಿಗೆ ಆಶೀರ್ವಾದದ ಕಾಲುವೆಗಳಾಗುತ್ತೇವೆ. ಆತನು ಪರಲೋಕದ ಸಿಂಹಾಸನದಿಂದ ಜೀವದ ನದಿಯ ನೀರನ್ನು ಹರಿಸುವವನಾಗಿದ್ದಾನೆ. ನಾವು ಇತರರಿಗೆ ದೇವರಲ್ಲಿ ಶ್ರದ್ಧೆಯಿಂದ ಮಾಡುವ ದನಿ ಕೇಳಿ ಸೈತಾನನ ಸಮಸ್ತಸೈನ್ಯವು ಹೆದರಿ ನಡುಗುತ್ತದೆ. ಎಲೆನ್

ಜಿ ವೈಟಮ್ಮನವರು ಪ್ರಾರ್ಥನೆಯ ಬಲದ ವಿವರಣೆಯನ್ನು ಈ ಗಮನೀಯ ಪದಗಳಲ್ಲಿ ಹೇಳಿದ್ದಾರೆ : ಸೈತಾನನು ತನ್ನ ಬಲವಾದ ವೈರಿಯು ಮೊರೆಯಿಡುವಾಗ ಅದನ್ನು ಸಹಿಸಲಾರನು. ಯಾಕೆಂದರೆ ಆತನು ಸರ್ವಶಕ್ತನಾದ ದೇವರ ಬಲ ಮತ್ತು ಗಾಂಭೀರ್ಯದ ಮುಂದೆ ಹೆದರಿ ನಡುಗುತ್ತಾನೆ. ಶ್ರದ್ಧಾ ಪೂರ್ವಕವಾಗಿ ಮಾಡುವ ಪ್ರಾರ್ಥನೆಗೆ ಸೈತಾನನ ಸಕಲಬಲವು ಹೆದರಿ ನಡುಗುತ್ತದೆ– "ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 1, ಪುಟ 346. ಕಳೆದು ಹೋದ ಗಂಡಸರು ಮತ್ತು ಹೆಂಗಸರ ಆತ್ಮಗಳಿಗಾಗಿ ಹೋರಾಡುವಾಗ ಮಾಡುವ ಪ್ರಾರ್ಥನೆಯು ನಮ್ಮನ್ನು ದೇವರ ಶಕ್ತಿಯ ಮೂಲಕ್ಕೆ ಸೇರಿಸುತ್ತದೆ.

ಮತ್ತಾಯ 18:18,19ನ್ನು ಓದಿರಿ. ಮಧ್ಯಸ್ಥಿಕೆಯ ಪ್ರಾರ್ಥನೆಯ ಈ ವಚನಗಳು ಯಾವ ಸಂಬಂಧವನ್ನು ಹೊಂದಿವೆ. ಕರ್ತನನ್ನು ತಿಳಿಯದ ಇತರರು ರಕ್ಷಣೆ ಹೊಂದುವುದಕ್ಕೆ ಪ್ರಾರ್ಥನೆ ಮಾಡಲು ಈ ವಚನಗಳು ನಮಗೆ ಹೇಗೆ ಉತ್ತೇಜನ ನೀಡುತ್ತವೆ?

**ಶುಕ್ರವಾರ** **ಜುಲೈ 24**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ದಿ ಪ್ರಿವಿಲೇಜ್ ಆಫ್ ಪ್ರೇಯರ್ಸ್' ಪುಟ 93–104, "ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕ" ಮತ್ತು "ವರ್ಕ್ ಫಾರ್ ಚರ್ಚ್ ಮೆಂಬರ್ಸ್" ಪುಟ 19–24, "ಟೆಸ್ಟಿಮೋನಿಸ್ ಫಾರ್ ದಿ ಚರ್ಚ್" ಸಂಪುಟ 7.

ನಾವು ಇತರರಿಗಾಗಿ ಪ್ರಾರ್ಥಿಸುವಾಗ ನಾವು ಆತನಿಗೆ ಬದ್ಧರಾಗಿ ಆತನ ಶಕ್ತಿಯ ಮೇಲೆ ಅವಲಂಬಿತರಾದುದಕ್ಕೆ ನಮ್ಮನ್ನು ಗೌರವಿಸಿ ದೇವರು ಪರಲೋಕದ ಸಮಸ್ತ ಸಂಪನ್ಮೂಲಗಳನ್ನು ಮಾನವರ ಜೀವನವನ್ನು ಮಾರ್ಪಡಿಸುವುದಕ್ಕಾಗಿ ನಿಯೋಜಿಸುತ್ತಾನೆ. ನಮ್ಮ ಪ್ರಾರ್ಥನೆಗಳು ಆತನ ಸಿಂಹಾಸನಕ್ಕೆ ಏರಿ ಹೋಗುತ್ತಲೇ ದೇವದೂತರು ಆತನ ಆದೇಶದಿಂದ ಕೂಡಲೆ ಕಾರ್ಯಪ್ರವೃತ್ತರಾಗುತ್ತಾರೆ. ಶ್ರದ್ಧಾಪೂರ್ವಕವಾಗಿ ನಂಬಿಕೆಯಿಂದ ಮಾಡಿದ ಪ್ರಾರ್ಥನೆಗೆ ಉತ್ತರಿಸಲು ಸೇವಾದೂತರು ಸಿಂಹಾಸನದ ಸುತ್ತಲೂ ಯೇಸುಕ್ರಿಸ್ತನ ಅಪ್ಪಣೆಯನ್ನು ಕೂಡಲೆ ಕೈಗೊಳ್ಳುವುದಕ್ಕೆ ಕಾಯ್ದುಕೊಂಡಿರುತ್ತಾರೆ– ಎಲೆನ್ ಜಿ ವೈಟಮ್ಮನವರ ಸೆಲೆಕ್ಟಡ್ ಮೆಸೇಜಸ್ ಪುಸ್ತಕದಲ್ಲಿ 377ನೇ ಪುಟ.

ದೇವರಿಗೆ ಮಾಡಿದ ಯಾವ ಒಂದು ಪ್ರಾರ್ಥನೆಯೂ ಕಳೆದುಹೋಗದು ಮತ್ತು ಮರೆತು ಹೋಗದು ಎಂಬ ಭರವಸೆಯು ನಮಗಿದೆ. ಅವುಗಳೆಲ್ಲವೂ ಆತನ ಚಿತ್ತದಂತೆ ತಕ್ಕಸಮಯ ಮತ್ತು ಸ್ಥಳದಲ್ಲಿ ಉತ್ತರ ಹೊಂದುವುದಕ್ಕಾಗಿ ಪರಲೋಕದಲ್ಲಿ ಸಂಗ್ರಹವಾಗಿರುತ್ತವೆ.

ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ಎಂದೆಂದಿಗೂ ಕಳೆದು ಹೋಗುವುದಿಲ್ಲ; ಆದರೆ ಯಾವಾಗಲೂ ನಾವು ನಿರೀಕ್ಷಿಸದ ವಿಷಯವು ನಿರೀಕ್ಷಿಸಿದ ರೀತಿಯಲ್ಲೇ ನಡೆಯುತ್ತದೆಯೆಂದು ಪ್ರತಿಪಾದಿಸುವುದು ಉದ್ಧಟತನ (ದಾರ್ಷ್ಟತ್ವ)ವಾಗುತ್ತದೆ– ಎಲೆನ್ ಜಿ ವೈಟಮ್ಮನವರ ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 1, 23ನೆ ಪುಟ. ನಾವು ಕ್ರಿಸ್ತನನ್ನರಿಯದ ನಮ್ಮ ಸಂಗಾತಿಗೆ, ಗಂಡು ಹೆಣ್ಣುಮಕ್ಕಳಿಗೆ, ಸಂಬಂಧಿಕರಿಗೆ, ಸ್ನೇಹಿತರಿಗೆ ಮತ್ತು ಸಹೋದ್ಯೋಗಿಗಳಿಗೆ ವಿಜ್ಞಾಪನೆ ಮಾಡುವಾಗ ಯಾವ ಪ್ರೋತ್ಸಾಹವನ್ನು ಇದು ನಮಗೆ ಕೊಡುತ್ತದೆ? ಪ್ರಾಮಾಣಿಕವಾಗಿ ಮಾಡಿದ ಯಾವುದೇ ಪ್ರಾರ್ಥನೆಯೂ ಎಂದಿಗೂ ನಿರರ್ಥಕವಾಗುವುದಿಲ್ಲ. ನಾವು ಕೇಳಿಕೊಳ್ಳುವುದಕ್ಕೆಲ್ಲಾ ಯಾವಾಗಲೂ ತಕ್ಷಣ ಉತ್ತರ ಸಿಗದಿರಬಹುದು. ಆದರೆ ದೇವರು ಯಾವಾಗಲೂ ಅವರ ಹೃದಯದಲ್ಲಿ ಚಲಿಸುತ್ತಿರುತ್ತಾನೆ ಎಂಬ ಸತ್ಯವು ನಿತ್ಯದಲ್ಲಿ ನಮಗೆ ತಿಳಿಯುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಫಿಲಿಪ್ಪಿ 1:19, ಕೊಲಸ್ಸೆ 4:2,3 ಮತ್ತು 2 ಥೆಸಲೋನಿಕ 3:1,2 ವಚನಗಳನ್ನು ಓದಿರಿ. ಸೆರೆಯಲ್ಲಿ ಫಿಲಿಪ್ಪಿಯವರಿಗೆ ಪ್ರಾರ್ಥಿಸುವಾಗ ಪೌಲನಿಗೆ ಯಾವ ಭರವಸೆಯಿತ್ತು? ಯಾವುದಕ್ಕಾಗಿ ಕೊಲಸ್ಸೆಯರಿಗೂ ಥೆಸಲೋನಿಕದವರಿಗೂ ತನಗೋಸ್ಕರ ಪ್ರಾರ್ಥಿಸಿರಿ ಎಂದು ಕೇಳಿಕೊಂಡನು? ಆತ್ಮಗಳನ್ನು ಗೆಲ್ಲುವುದಕ್ಕೂ ಮಧ್ಯಸ್ಥಿಕೆ ಪ್ರಾರ್ಥನೆ ವಿಜ್ಞಾಪನೆಗೂ ಯಾವ ಸಂಬಂಧವಿದೆ?

2. ಮಹಾಹೋರಾಟದ ವಾಸ್ತವಿಕತೆಯ ಮೇಲೂ ಮತ್ತು ನಾವು ಜೀವಿಸುತ್ತಿರುವ ಲೋಕದಲ್ಲಿ ಇದು ರೂಪಿಸುವ ಆಡಂಬರದ ವಿವರಣೆಯ ಮೇಲೂ ಚಿಂತಿಸಿರಿ. ಈ ಹೋರಾಟದ ಜ್ಞಾನವು ಪ್ರಾರ್ಥನೆಯ ಮಹತ್ವವನ್ನು ಹೇಗೆ ನಮ್ಮ ಅರಿವಿಗೆ ತರುತ್ತದೆ? ಹೌದು, ಯೇಸುಕ್ರಿಸ್ತನು ಯುದ್ಧದಲ್ಲಿ

ಜಯಶಾಲಿಯಾಗಿದ್ದಾನೆ ಮತ್ತು ಆತನ ಕಡೆಯವರೂ ಸಹಾ ಗೆಲ್ಲುತ್ತಾರೆ ಎಂಬುದು ನಮಗೆ ಗೊತ್ತಿದೆ. ಆದರೆ ಏತನ್ಮಧ್ಯೆ ನಾವು ಆತನಿಗೆ ನಂಬಿಗಸ್ತರಾಗಿ ಉಳಿಯಲು ಮತ್ತು ಇತರರ ರಕ್ಷಣೆಗಾಗಿ ದುಡಿಯಲು ಆತನಿಗೆ ಪ್ರಾರ್ಥಿಸುತ್ತಾ ಆತನನ್ನು ಹಂಬಲಿಸುತ್ತಾ ಏನೆಲ್ಲಾ ನಮ್ಮಿಂದ ಮಾಡಲು ಸಾಧ್ಯವೋ ಅದನ್ನೆಲ್ಲಾ ಮಾಡುವುದು ಬಹಳ ಮುಖ್ಯವಾಗಿದೆ ಯಾಕೆ?

3. ಹೆಚ್ಚು ಪರಿಣಾಮಕಾರಿಯಾದ ಮಧ್ಯಸ್ಥಿಕೆಯ ಪ್ರಾರ್ಥನೆಗೆ ಇರುವ ಕೆಲವು ಅಡಚಣೆಗಳಾವುವು? ಅವಶ್ಯಕತೆಯಲ್ಲಿರುವ ಇತರರಿಗಾಗಿ ಪ್ರಾರ್ಥನೆ ಮಾಡದಿರುವುದಕ್ಕೆ ಎಂಥಾ ನೆಪಗಳನ್ನು ನೀವು ಕೊಡುವವರಾಗಿದ್ದೀರಿ?